(ಆ) ಬಂದಿದೆ

(ಇ) ಈಗಾಗಲೇ ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕಿನಲ್ಲಿ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಲ್ಲಿ ಎಪಿಎಲ್ ಪಡಿತರ ಕೂಪನ್‌ಗಳನ್ನು ಪಡೆದಿದ್ದು ಬಿಪಿಎಲ್ ಪಡಿತರ ಕೂಪನ್ ಕೋರಿ ಸಲ್ಲಿಸಿರುವ ಅಹವಾಲುಗಳನ್ನು ಪರಿಶೀಲಿಸಿದ್ದು ಅರ್ಹತೆಗನುಗುಣವಾಗಿ 6731 ಬಿಪಿಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ ಹಾಗೂ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ

759 (1118) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಹೆಚ್ಚಿನ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳು ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯೇ ?

(ಆ) ಹಾಗಿದ್ದಲ್ಲಿ, ಶಿಗ್ಗಾಂವ ತಾಲ್ಲೂಕು ಹೊಸೂರ, ಗಂಜೀಗಟ್ಟಿ ವನಹಳ್ಳಿ, ಚಿಕ್ಕಮಲ್ಲೂರ, ಬಾಡ ಗ್ರಾಮಗಳಿಗೆ ಹಾಗೂ ಸವಣೂರ ತಾಲ್ಲೂಕು ಮಂಟಗಣಿ, ಡಂಬರಮತ್ತೂರ, ಮನ್ನಂಗಿ, ಚಳ್ಳಾಳ, ಕುರಬರ ಮಲ್ಲೂರ ಗ್ರಾಮಗಳಲ್ಲಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿ ರೈತರಿಗೆ ಅನುಕೂಲ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ ?

(ಇ) ಧಾರವಾಡ ಕೆ ಸಿ ಸಿ ಬ್ಯಾಂಕ್ ಪುನಶ್ಚೇತನಗೊಳಿಸಲು ಸರ್ಕಾರದ ಕ್ರಮವೇನು ?

(ಈ) ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳಿಂದ ರೈತರಿಗೆ ಸಾಲ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಪ್ರಸ್ತುತ ಶಿಗ್ಗಾಂವ ತಾಲ್ಲೂಕಿನಲ್ಲಿ 28 ಹಾಗೂ ಸವಣೂರು ತಾಲ್ಲೂಕಿನಲ್ಲಿ 21 ಪಿಕೆಪಿಎಸ್/ವಿಎಸ್‌ಎಸ್‌ಎಸ್ ಬ್ಯಾಂಕುಗಳು ಇರುತ್ತವೆ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಹೊಸದಾಗಿ ವ್ಯವಸಾಯ ಸೇವಾ ಸಹಕಾರಿ ಸಂಘ/ ಬ್ಯಾಂಕುಗಳನ್ನು ರಚಿಸುವ ಅವಶ್ಯಕತೆ ಕಂಡು ಬರುವುದಿಲ್ಲ

(ಆ) ಈ ಗ್ರಾಮಗಳು ಕೃಷಿ ಪತ್ತಿನ ಸಹಕಾರ ಸಂಘವನ್ನು ನೋಂದಣಿ ಮಾಡಲು ನಬಾರ್ಡ್ ವಿಧಿಸಿರುವ ಮಾರ್ಗಸೂಚಿಗಳ ಪ್ರಕಾರ ಅರ್ಹತೆಯನ್ನು

ಹೊಂದಿರುವುದಿಲ್ಲ ಹಾಗೂ ಹಾಲಿ ಈ ಗ್ರಾಮಗಳು ಸೇರ್ಪಡೆಯಾಗಿರುವ ವ್ಯವಸಾಯ ಸೇವಾ ಸಹಕಾರಿ ಸಂಘ/ಬ್ಯಾಂಕುಗಳಿಂದ ತೊಂದರೆಯಿಲ್ಲದೆ ಸೇವೆಯನ್ನು ಪಡೆಯಬಹುದಾಗಿದೆ

(ಇ) (1) ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಲಾಗಿದೆ ಸದ್ಯಕ್ಕೆ ಧಾರವಾಡ ಜಿಲ್ಲಾಧಿಕಾರಿಯವರು ಬ್ಯಾಂಕಿನ ಆಡಳಿತಗಾರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ

(2) ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ

(3) ಸಾಲ ವಸೂಲಾತಿಗಾಗಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ

4) ಬ್ಯಾಂಕಿನ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ

(5) ಬ್ಯಾಂಕಿನ ವೆಚ್ಚವನ್ನು ತಗ್ಗಿಸಲು ಅಶಕ್ತವಾಗಿದ್ದ ಸುಮಾರು 50 ಶಾಖೆಗಳನ್ನು ಮುಚ್ಚಲಾಗಿದೆ

(6) ಸರ್ಕಾರವು ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದರ ಪುನಶ್ಚೇತನಕ್ಕಾಗಿ ರೂಪಿಸಿದ ವಿಶೇಷ ಪ್ಯಾಕೇಜ್‌ನಲ್ಲಿ ದಿನಾಂಕ 30–06–2003 ಕ್ಕೆ ಸುಸ್ತಿ ಇದ್ದು, ದಿನಾಂಕ 31–03–2004 ರೊಳಗಾಗಿ ಸಂಬಂಧಪಟ್ಟ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ರೈತರು ಸುಸ್ತಿ ಕೃಷಿ ಸಾಲಗಳ ಅಸಲನ್ನು ಮರುಪಾವತಿಸಿದಲ್ಲಿ ಅಂತಹ ರೈತರ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿರುತ್ತದೆ ಈ ಮನ್ನಾದಿಂದ ಉಂಟಾದ ನಷ್ಟವನ್ನು ರೂ 50 00 ಕೋಟಿಗೆ ಸೀಮಿತಗೊಳಿಸಿ ಸರ್ಕಾರ, ಅಪೆಕ್ಸ್ ಬ್ಯಾಂಕ್ ಮತ್ತು ಕೆಸಿಸಿ ಬ್ಯಾಂಕ್ ನಿ, ಧಾರವಾಡ ಅನುಕ್ರಮವಾಗಿ ಶೇ 50 25 25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಿರುತ್ತದೆ ಸರ್ಕಾರದ ವತಿಯಿಂದ ಬಿಡುಗಡೆ ಮಾಡಬೇಕಾದ 25 00 ಕೋಟಿ ರೂ ಗಳನ್ನು ಮತ್ತು ಅಪೆಕ್ಸ್ ಬ್ಯಾಂಕಿನ ವತಿಯಿಂದ ಬಿಡುಗಡೆ

ಮಾಡಬೇಕಾದ 12 50 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ

(7) ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ನಿಧಿಗಳಿಂದ ರೂ 73 00 ಕೋಟಿಗಳ ಅಲ್ಪಾವಧಿ ಕೃಷಿ ಪತ್ತಿನ ಮಿತಿಯನ್ನು ಮಂಜೂರು ಮಾಡಿರುತ್ತದೆ

(8) ಮುಂಗಾರು 2002 ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರೆವಿಗೆ ರೂ 3 18 ಕೋಟಿ ಬಿಡುಗಡೆಗೊಳಿಸಲಾಗಿದೆ

(9) 2005–06ನೇ ಸಾಲಿನ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯಡಿ ಬ್ಯಾಂಕಿಗೆ ಇದುವರೆಗೆ ರೂ 54–30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ

(10) ರೇವಣಿದಾರರಿಗೆ ರೂ 24 05 ಕೋಟಿ ರೇವಣಿ ಹಣ ವಾಪಸ್ಸು ಮಾಡಲಾಗಿದೆ (ಏಪ್ರಿಲ್–2006 ರಿಂದ 21–3–2007 ರವರೆಗೆ)

(ಈ) ಧಾರವಾಡ ಕೆ ಸಿ ಸಿ ಬ್ಯಾಂಕ್ ವತಿಯಿಂದ ಹಾವೇರಿ ಜಿಲ್ಲೆಯಲ್ಲಿ ಅಸಲನ್ನು ಮರುಪಾವತಿಸಿ ಬಡ್ಡಿ ಮನ್ನಾ ಸೌಲಭ್ಯ ಪಡೆದ ರೈತರಿಗೆ ಈಗಾಗಲೇ 2007–08 ನೇ ಸಾಲಿಗೆ ಕೃಷಿ ಸಾಲವನ್ನು ವಿತರಿಸಿದೆ ಸಾಲ ಮನ್ನಾ ಸೌಲಭ್ಯ ಪಡೆದಂತಹ ರೈತರಿಗೆ ಕೂಡ ಪುನಃ ಬೆಳೆ ಸಾಲವನ್ನು ವಿತರಿಸುವ ಕಾರ್ಯವು ಈಗ ಪ್ರಗತಿಯಲ್ಲಿರುತ್ತದೆ

760 (1119) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2006–07 ಸಾಲಿನಲ್ಲಿ ನೇ ಸಾಲಿನಲ್ಲಿ ಶಿಗ್ಗಾಂವ್ ಸವಣೂರ ತಾಲ್ಲೂಕುಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು (ಕಾಮಗಾರಿವಾರು) ವಿವರ ಒದಗಿಸುವುದು),

(ಆ) ಶಿಗ್ಗಾಂವ ಸವಣೂರ ತಾಲ್ಲೂಕುಗಳಿಗೆ "ರಾಷ್ಟ್ರೀಯ ತೋಟಗಾರಿಕಾ ಮಿಷನ್" ಕಾರ್ಯಕ್ರಮದಡಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,